# ಎನ್ನ ಮನದ ಡೊಂಕ ತಿದ್ದಿಸೋ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The lyrics as per Ref. 1 are mentioned without highlights. The lyrics as per Ref. 2 are slightly different and are given in green highlights. The wordings as per Ref. 3 are given in yellow highlights.
5. **Note:** The singer has followed the lyrics in Ref. 3.

ರಾಗ: ಪಂತುವರಾಳಿ ತಾಳ: ಆದಿ

ಎನ್ನ ಮನದ ಡೊಂಕ ತಿದ್ದಿಸೋ
ಹೇ ಶ್ರೀನಿವಾಸ || ಪ ||

ಇನ್ನು ಸಂಶಯವೇಕೆ ಕೃಷ್ಣ
ನಿನ್ನ ಚರಣದಲ್ಲಿ ಸೇರಿಸೋ || ಅಪ ||

ಎನ್ನ ಮನದ ಡೊಂಕ ತಿದ್ದಿ
ಚರಣದಲ್ಲಿ ಸೇರಿಸೋ
ನಿನ್ನ ಸೇವಕನಾದ ಮೇಲೆ
ಇನ್ನು ಸಂಶಯವೇಕೆ ಕೃಷ್ಣ || ಪ ||

ಉದಯವಾದರೆ ಊಟದ ಚಿಂತೆ
ಅದರ ಮೇಲೆ ಭೋಗದ ಚಿಂತೆ
ಹದಿನಾಲ್ಕು ಲೋಕವಾಳಬೇಕೆಂಬ ಚಿಂತೆ
ಇದು ಪುಣ್ಯ ಇದು ಪಾಪವೆಂದು
ಹೃದಯದಲಿ ಭಯವಿಲ್ಲದೆ
ಮದನ ಮೋಹನ ನಿನ್ನ
ಪದವ ನಂಬದೆ ದೀನದಯಾಳೋ || 1 ||

ಉದಯವಾದರೆ ಊಟದ ಚಿಂತೆ
ಅದರ ಮೇಲೆ ಭೋಗದ ಚಿಂತೆ
ಹದಿನಾಲ್ಕು ಲೋಕವನಾಳಬೇಕೆಂಬ ಚಿಂತೆ
ಇದು ಪುಣ್ಯ ಪಾಪವೆಂದು
ಹೃದಯದಲ್ಲಿ ಭಯವಿಲ್ಲದಲೆ
ಮದಮೋಹಿತನಾದೆ ನಿನ್ನ
ಪದವ ನಂಬದೆ ದಯಾಳೋ

ನೆರೆಮನೆಯ ಭಾಗ್ಯ ನೋಡಿ
ಸೈರಿಸಲಾರದಸೂಯನಾಗಿ
ಹರಿ ಸ್ಮರಣೆಗೆ ವಿಮುಖನಾದೆ
ನರರ ಸ್ತುತಿಯ ಮಾಡಿದೆ
ಪರರ ಸತಿಗೆ ಪರರ ಅನ್ನಕ್ಕೆ
ತಿರುಗಿ ತಿರುಗಿ ಚಪಲನಾದೆ
ಗುರುಹಿರಿಯರ ದೂಷಿಸಿ
ಮರುಳಾದೆ ದೀನ ಶರಣ್ಯ || 2 ||

ನೆರೆಮನೆಗಳ ಭಾಗ್ಯವ ನೋಡಿ
ತರಹರಿಸುತ ಅಸೂಯೆಯಿಂದ
ಹರಿಯ ಸ್ಮರಣೆಗೆ ವಿಮುಖನಾದೆ
ನರರ ಸ್ತುತಿಯ ನಾ ಮಾಡಿದೆ
ಪರರ ಸತಿಗೆ ಪರರನ್ನಕ್ಕೆ
ತಿರುಗಿ ತಿರುಗಿ ಚಪಲನು ಆದೆ
ಗುರುಹಿರಿಯರ ದೂಷಿಸುತಲಿ
ಮರುಳನಾದೆ ದೀನ ಶರಣ್ಯ

ಅಗಣಿತ ಸುಖ ಬಂದರೆ
ಧನಿಕ ನಾನೆಂಬೆ
ಮಿಗೆ ಹಾನಿಗೆ ಹರಿಯ ದೂಷಿಸಿ
ನೆಗೆದು ಪತಂಗ ಕಿಚ್ಚಿಲಿ ಬೀಳುವ
ಬಗೆಯಾದೆನು ಪುರಂದರ ವಿಠಲ
ಖಗರಾಜ ಸುವಾಹನ || 3 ||

ಅಗಣಿತ ಸುಖ ಬಂದರೆ ನಾನು
ಅಗಣಿತ ದುಃಖಕೆ ಹರಿಯೆನ್ನುವೆನು
ಜಗದೊಳಾವ ಲಾಭವು ಬಂದರು
ಧಣಿಯು ನಾನೆ ಎಂಬೆ
ಮಿಗೆ ಹಾನಿಗೆ ಹರಿಯನು ದೂಷಿಸಿ
ನೆಗೆದು ಪತಂಗವು ಕಿಚ್ಚಲಿ ಬೀಳುವ
ಬಗೆ ನಾನಾದೆನು ಪುರಂದರ ವಿಠಲ
ಖಗರಾಜ ಸುವಾಹನ ಶ್ರೀ ಕೃಷ್ಣ

**Note:** The wordings given below, in yellow highlights, are as per Ref. 3 above and the singer has followed these wordings.

ಎನ್ನ ಮನದ ಡೊಂಕ ತಿದ್ದಿಸೋ, ಶ್ರೀನಿವಾಸ
ಎನ್ನ ಮನದ ಡೊಂಕ ತಿದ್ದಿಸೋ || ಪ ||

ಎನ್ನ ಮನದ ಡೊಂಕ ತಿದ್ದಿಸಿ
ನಿನ್ನ ಸೇವಕನಾದ ಮೇಲೆ
ಇನ್ನು ಸಂಶಯವೇಕೆ ಕೃಷ್ಣ
ನಿನ್ನ ಚರಣದಲ್ಲಿ ಸೇರಿಸೋ || ಅಪ ||

ಉದಯವಾದರೆ ಊಟದ ಚಿಂತೆ
ಅದರ ಮೇಲೆ ಭೋಗದ ಚಿಂತೆ
ಹದಿನಾಲ್ಕು ಲೋಕವನಾಳಬೇಕೆಂಬ ಚಿಂತೆ

ಇದು ಪುಣ್ಯ ಇದು ಪಾಪವೆಂದು
ಹೃದಯದಲಿ ಭಯವಿಲ್ಲದೆ
ಮದಮೋಹಿತನಾದೆ ನಿನ್ನ
ಪದವ ನಂಬದೆ ದೀನದಯಾಳೋ || 1 ||

ನೆರೆಮನೆಯ ಭಾಗ್ಯ ನೋಡಿ
ಸಹಿಸಲಾರದೆ ಅಸೂಯನಾಗಿ
ಹರಿ ಸ್ಮರಣೆಗೆ ವಿಮುಖನಾದೆ
ನರರ ಸ್ತುತಿಯ ಮಾಡಿದೆ
ಪರರ ಸತಿಗೆ ಪರರ ಅನ್ನಕ್ಕೆ
ತಿರುಗಿ ತಿರುಗಿ ಚಪಲನಾದೆ
ಗುರುಹಿರಿಯರ ದೂಷಿಸಿ
ಮರುಳಾದೆ ದೀನ ಶರಣ್ಯ || 2 ||

ಅಗಣಿತ ಸುಖ ಬಂದರೆ ನಾ
ಅಗಣಿತ ದುಃಖಕೆ ಹರಿಯೆಂಬುವೆ
ಜಗದೊಳು ಲಾಭವು ಬಂದರೆ
ಧನಿಕ ನಾನೆಂಬೆ
ಮಿಗೆ ಹಾನಿಗೆ ಹರಿ ದೂಷಿಸಿ
ನೆಗೆದು ಪತಂಗ ಕಿಚ್ಚಿಲಿ ಬೀಳ್ವ
ಬಗೆಯಾದೆನು ಪುರಂದರ ವಿಠಲ
ಖಗರಾಜ ಸುವಾಹನ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಮನಸ್ಸಿನ ಡೊಂಕುಗಳು ಬಹು ಬಗೆಯಾದುವು. ಅನ್ನ, ಭೋಗ, ಅಧಿಕಾರ, ಕಾಮ, ಅಸೂಯೆ, ಗುರುದೂಷಣೆ, ಹಾನಿಬಂದಾಗ ದೈವನಿಂದೆ–ಈ ಜಾಲದಲ್ಲಿ ಸಿಕ್ಕಿಕೊಳ್ಳುವ ಮನಸ್ಸು ಅಂಕುಡೊಂಕುಗಳಲ್ಲೇ ಸಾಗಬಯಸುತ್ತದೆ.

**ತರಹರಿಸು** = ಕಳವಳಿಸು

**ಶರಣ್ಯ** = ಆಶ್ರಯ ಕೊಡುವವ

**ಪತಂಗ** = ದೀಪದ ಹುಳು

**ಖಗರಾಜ ಸುವಾಹನ –** ಗರುಡವಾಹನ, ವಿಷ್ಣು.

**Classification:** Keerthane
**Ankita:** purandara vittala
**Location:** NA
**Category:** jeevanoddhara, bhakti
**Sub-Category:** Vishnu, srinivasa, oota, beligge, bhoga, chinte, loka, punya, papa, hrudaya, daya, Bhagya, Krishna, patni, anna, smarane, sharana, aganita, sukha, mana, udaya, dina, mane, patni,
**Pravachana:** NA
**Explanation:** NA